

# ಪ್ರವಾಸಿಗರ ಸ್ವರ್ಗ

ಹಲವು ಜಗತ್ತುಗಳು ಒಂದೇ ನಾಡಿನಲ್ಲಿ ನೆಲೆಗೊಂಡಿರುವ ಹಿರಿಮೆ ಕರ್ನಾಟಕದ್ದು. ಪ್ರತಿವರ್ಷ ಲಕ್ಷಾಂತರ ಪ್ರವಾಸಿಗರು ಕರ್ನಾಟಕಕ್ಕೆ ಧಾವಿಸಿ ಬರುತ್ತಿದ್ದಾರೆ.

ರಾಜ್ಯ ಸರ್ಕಾರ ನೂತನ ಪ್ರವಾಸೋದ್ಯಮ ನೀತಿ 2015––20 ಅನ್ನು ಜಾರಿಗೊಳಿಸಿದೆ. ಖಾಸಗಿ ಹೂಡಿಕೆ ಉತ್ತೇಜಿಸಲು 20 ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ.

**5 ವರ್ಷಗಳಲ್ಲಿ 2171 ಕೋಟಿ ರೂಪಾಯಿ ಹೂಡಿಕೆ**



ಕಳೆದ ಐದು ಆಯವ್ಯಯಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಒಟ್ಟು ರೂ.2171 ಕೋಟಿ ಅನುದಾನ ನೀಡಲಾಗಿದ್ದು, ಕರ್ನಾಟಕದ ಇಂದು ಜಗತ್ತಿನ ಪ್ರವಾಸೋದ್ಯಮ ನಕ್ಷೆಯಲ್ಲೇ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುವತ್ತ ದಾಪುಗಾಲಿಟ್ಟಿದೆ.

ಪ್ರವಾಸಿ ತಾಣಗಳಲ್ಲಿ ದೇಶಿ ಹಾಗೂ ವಿದೇಶಿ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ 92 ಮಹಿಳೆಯರು ಸೇರಿ 472 ಗೃಹ ರಕ್ಷಕರಿಗೆ ತರಬೇತಿ ನೀಡಿ ಪ್ರವಾಸಿ ಮಿತ್ರರನ್ನಾಗಿ ನಿಯೋಜನೆ ಮಾಡಲಾಗಿದೆ. ಕರ್ನಾಟಕದ ಯಾವುದೇ ಮೂಲೆಯಲ್ಲಿ ಪ್ರವಾಸಿಗರು ಸುರಕ್ಷಿತವಾಗಿ ಓಡಾಡಬಹುದು.

★ ಎಸ್‌ಸಿ/ ಎಸ್‌ಟಿ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ 3,800 ಟ್ಯಾಕ್ಸಿಗಳನ್ನು ವಿತರಣೆ ಮಾಡಲಾಗಿದೆ. ಈ ಯೋಜನೆಯಿಂದ ಒಂದೆಡೆ ಸಾಮಾಜಿಕ ಸಬಲೀಕರಣ, ಇನ್ನೊಂದೆಡೆ ಪ್ರವಾಸಿಗರ ಮೂಲಸೌಲಭ್ಯ ವಿಸ್ತರಣೆ ಆದಂತಾಗಿದೆ.

★ ವಿವಿಧ ಧರ್ಮಗಳ ಪ್ರವಾಸಿಗರು ತಮ್ಮ ಪುಣ್ಯ ಕ್ಷೇತ್ರಗಳಿಗೆ ಕಡಿಮೆ ವೆಚ್ಚದಲ್ಲಿ ಭೇಟಿ ನೀಡಲು ಅನುಕೂಲವಾಗುವಂತೆ ಪುನೀತ ಯಾತ್ರೆ ಯೋಜನೆಗೆ ಚಾಲನೆ ನೀಡಲಾಗಿದೆ.

ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಸಂಪೂರ್ಣ ಮಾಹಿತಿಯನ್ನು ನಿಮ್ಮ ಕೈಬೆರಳ ತುದಿಯಲ್ಲಿ ಸಿಗುವಂತೆ ಒದಗಿಸಲು ಸಮಗ್ರ ಡಿಜಿಟಲ್ ವೇದಿಕೆ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ.

ಹಲವು ಜಗತ್ತುಗಳು ಒಂದೇ ನಾಡಿನಲ್ಲಿ ನೆಲೆಗೊಂಡಿರುವ ಕರ್ನಾಟಕವನ್ನು ಸುತ್ತಾಡುವುದು ಈಗ ಹಿಂದೆಂದಿಗಿಂತ ಸುಲಭ.